ಶ್ರೀ ಸಿ.ಎಂ. ಇಬ್ರಾಹಿಂ.—ಮೈಸೂರಿನ ಬಗ್ಗೆ ಕೇಳಿದರೆ ಅವರಿಗೆ ಈ ವಿಚಾರದಲ್ಲಿ ಒಂದು ಸಪರೇಟ್ ಮೀಟಿಂಗ್ ಮಾಡುತ್ತೇವೆಂದು ಹೇಳಿದಿರಿ ಹಾಗೆಯೇ ಬೆಂಗಳೂರಿನಲ್ಲೂ ಎಲ್ಲಾ ಶಾಸಕರನ್ನೂ ಕರೆದು ಈ ವಿಚಾರದಲ್ಲಿ ಒಂದು ಸಪರೇಟ್ ಮೀಟಿಂಗ್ ಮಾಡಿದರೆ ಆ ಜನಗಳಿಗೆ ಸ್ವಲ್ಪವಾದರೂ ಕೂಡ ಸಮಾಧಾನ ವಾಗುತ್ತದೆ. ಹಾಗೆ ಮಾಡುತ್ತೀರಾ?

ಶ್ರೀ ಧರ್ಮಸಿಂಗ್.—ಬೆಂಗಳೂರಿನಲ್ಲಿ ಅಂಥಾ ಅವಶ್ಯಕತೆ ಬಿದ್ದರೆ ನಿಮ್ಮನ್ನು, ಎಲ್ಲರನ್ನೂ ಕರೆಸಿ ಮೀಟಿಂಗ್ ಮಾಡೋಣ. ಆದರೆ ಬಿ ಡಿ ಎ ನವರು ಲೇಔಟ್ ಮಾಡುವಾಗ ಇವೆಲ್ಲವನ್ನೂ ಪರಿಶೀಲಿಸಿಯೇ ಮಾಡುತ್ತಾರೆ. ತಮಗೆ ಹೇಳಬೇಕಾದರೆ ಎಲ್ಲಿ ಆ ಜನರಿಗೆ ತೊಂದರೆಯಾಗಿದೆ, ಎಲ್ಲಿ ಮನೆಗಳನ್ನು ಡೆಮಾಲಿಷ್ ಮಾಡಿದ್ದಾರೆ, ಆ ಜನರಿಗೆ ತೊಂದರೆಯಾಗದೇ ಇರುವ ಹಾಗೆ ಅವರಿಗೆ ಈಗಾಗಲೇ ಇಷ್ಟು ಆಲ್ಟರ್‌ನೇಟೀವ್ ಸೈಟ್ಸ್ ಅನ್ನು ಕೊಟ್ಟಿದ್ದಾರೆ. ಒಂದು ವೇಳೆ ಬಿ.ಡಿ.ಎ. ನವರು ಹಾಗೆ ಮಾಡದೇ ಹೋದರೆ, ಆ ಜನಗಳಿಗೆ ತೊಂದರೆ ಉಂಟು ಮಾಡುವುದಾದರೆ ಆ ಸಂದರ್ಭದಲ್ಲಿ ಏನು ಕ್ರಮ ತೆಗೆದು ಕೊಳ್ಳಬೇಕೋ ತೆಗೆದುಕೊಳ್ಳೋಣ.

Improvement of Slums in Tiptur Town

901 SRI V.L. SHIVAPPA (Tiptur).—Will the Minister for Housing and Urban Development be pleased to state:—

(*a*) the number of slums which have been recognised within the limits of Tiptur Town Municipality;

(*b*) the measures undertaken to improve these slums?

SRI DHARAM SINGH.—Minister for Housing and Urban Development.

(*a*) 12 Slums have been recognised within the limits of Tiptur Town Municipality.

(*b*) (1) The Karnataka Slum Clearance Board has provided underground drainage system etc., to the Guruppana Katte Slum Area.

(2) Action has been taken for the developmental programmes at a cost of Rs. 3.00 lakhs to the Slum Area situated opposite to the R.C.C. over-head tank and the works are under progress.

(3) It is proposed to spend a sum of Rs. 2.00 lakhs for the developmental programmes for the year 1982-83 to the slum area situated behind Lakshmi Talkies (Karibasappa's land).

Besides, 10 Bore-Wells have been installed in the above said slum areas.

ಶ್ರೀ ವಿ.ಎಲ್. ಶಿವಪ್ಪ.—(ಅ) ಗೆ ಉತ್ತರವಾಗಿ ತಿಪಟೂರು ಪುರಸಭೆಯ ವ್ಯಾಪ್ತಿಯಲ್ಲಿ ಗುರುತಿಸಿರುವ ಕೊಳಚೆ ಪ್ರದೇಶಗಳ ಸಂಖ್ಯೆ ೧೨ ಅಂತ ಹೇಳಿದ್ದೀರಿ. ಇದರಲ್ಲಿ ಸರ್ಕಾರದವರು ಎಷ್ಟು ಪ್ರದೇಶ ಗಳನ್ನು ಮಶಕ್ಕೆ ತೆಗೆದುಕೊಂಡಿದ್ದಾರೆ, ಅದು ಯಾವ್ಯಾವ ಹಂತದಲ್ಲಿದೆ ಅನ್ನುವುದನ್ನು ಹೇಳುತ್ತೀರಾ?

ಶ್ರೀ ಧರ್ಮಸಿಂಗ್.—ಸರ್ಕಾರದವರು ಐಡೆಂಟಿಫೈ ಮಾಡಿರುವುದು ೧೨ ಸ್ಲಂಸ್. ಅದರಲ್ಲಿ ೪ ಸ್ಲಂಸ್‌ಗಳು ಫೈನಲ್ ಆಗಿ ಸರ್ಕಾರದ ವಶಕ್ಕೆ ತೆಗೆದುಕೊಂಡಿದೆ. ಇನ್ನು ೮ ಸ್ಲಂಸ್‌ಗಳು ಪ್ರಿಲಿಮಿನರಿ ಯಾಗಿ ಡಿಕ್ಲೇರ್ ಆಗಿದೆ. ಅದರಲ್ಲಿ ೫೧೬೪ ಜನಸಂಖ್ಯೆ ಇದೆ, ಮತ್ತು ಅದರಲ್ಲಿ ೧೩೧೦೦೦ ಫ್ಯಾಮಿಲಿ ಇವೆ.

ಶ್ರೀ ವಿ.ಎಲ್. ಶಿವಪ್ಪ.—ಸ್ವಾಮಿ, ಈ ಪ್ರಶ್ನೆಯ (ಅ) ಗೆ ಉತ್ತರವಾಗಿ (ಇ) ರಲ್ಲಿ ಲಕ್ಷ್ಮೀ ಟಾಕೀಸ್ ಹಿಂಭಾಗದ ಕೊಳಚೆ ಪ್ರದೇಶ (ಕರಿಬಸಪ್ಪನ ಜಮೀನು)ಕ್ಕೆ ರೂ. ೨-೦೦ ಲಕ್ಷ ವೆಚ್ಚದಲ್ಲಿ ೧೯೮೨-೮೩ ರ ಸಾಲಿಗೆ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ ಅಂತ ಹೇಳಿದ್ದೀರಿ. ಅಲ್ಲಿ ೩೦೦ ಗುಡಿಸಲುಗಳು ಇವೆ. ಆ ಜಾಗವನ್ನು ಇನ್ನೂ ಡೆವೆಲಪ್ ಮಾಡದೇ ಇರುವುದಕ್ಕೆ ಕಾರಣ ಏನು? ಮತ್ತು ಆ ಜಾಗದಲ್ಲಿರತಕ್ಕಂಥಾವರು ಬಿಡುವುದಿಲ್ಲ. ಒಂದು ಭಾಗದಲ್ಲಿ ಮನೆಗಳನ್ನು ಕಟ್ಟಿ ಇನ್ನೊಂದು ಭಾಗದಲ್ಲಿ ಅವರ ಮನವೊಲಿಸಿ ಬಿಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಧರ್ಮಸಿಂಗ್.—ಈ ಬಗ್ಗೆ ಈಗಾಗಲೇ ಸ್ಲಂ ಕ್ಲಿಯರೆನ್ಸ್ ಬೋರ್ಡ್ ಇದೆ, ಅವರು ಅದನ್ನು ಇಂಪ್ರೂವ್ ಮಾಡುತ್ತಾರೆ. ಅವರ ಇಂಪ್ರೂವ್ ಮೆಂಟ್‌ಗೆ ಈಗಾಗಲೇ ೬½ ಲಕ್ಷ ರೂಪಾಯಿ ಕೊಟ್ಟಿದ್ದೇವೆ, ಅಲ್ಲಿ ೮ ಬೋರ್‌ವೆಲ್ಸ್ ಹಾಕಿ ಅದಕ್ಕೆ ೨ ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಎಲ್ಲಿ ಪರ್ಮನೆಂಟ್ ಗುಡಿಸಲುಗಳು ಇರುತ್ತವೆ ಅದನ್ನು ಹುಡ್ಕೋ ಸ್ಕೀಂನಲ್ಲಿ ತೆಗೆದುಕೊಳ್ಳಬೇಕಾದರೆ ಅಲ್ಲಿ ಲ್ಯಾಂಡ್ ಪ್ರಾಬ್ಲಮ್ಸ್ ಬರುತ್ತದೆ. ಆದರೆ ಈ ಬಗ್ಗೆ ಒಂದು ಪರ್ಮನೆಂಟ್ ಸ್ಕೀಂ ಹಾಕಿಕೊಂಡು ಅಲ್ಲಿರತಕ್ಕಂಥಾ ಗುಡಿಸಲಿನವರಿಗೆ ೮½ ಸಾವಿರ ರೂಪಾಯಿನಲ್ಲಿ ಕಟ್ಟಿಸಿಕೊಡಬೇಕು ಅನ್ನುವ ಒಂದು ಯೋಜನೆ ಹಾಕಿಕೊಂಡಿದ್ದೇವೆ.

ಶ್ರೀ ವಿ.ಎಲ್. ಶಿವಪ್ಪ.—ಈ ಹುಡ್ಕೋ ಸ್ಕೀಂನ ಯೋಜನೆಯಲ್ಲಾದರೂ ಅವರಿಗೆ ಮನೆಗಳನ್ನು ಕಟ್ಟಿಸಿಕೊಡುವ ಹಾಗೆ, ಅವರಿಗೆ ವಸತಿ ಮಾಡಿಕೊಡುವ ಹಾಗೆ ಆ ಜನಗಳಲ್ಲಿ ನಂಬಿಕೆ ಹುಟ್ಟಿಸುವುದಕ್ಕೆ ಸಾಧ್ಯವೇ?

ಶ್ರೀ ಧರ್ಮಸಿಂಗ್.—ಹುಡ್ಕೋ ಸ್ಕೀಂ ನಲ್ಲಿ ಅವರಿಗೆ ವಸತಿ ಮಾಡಿಕೊಡುವ ಯೋಜನೆಯನ್ನು ತೆಗೆದುಕೊಳ್ಳೋಣ.

ಶ್ರೀ ಪಂಪಾವತಿ.—ಸ್ವಾಮಿ, ಈ ಕೊಳಚೆ ಪ್ರದೇಶಗಳು ಸಾಮಾನ್ಯವಾಗಿ ಎಲ್ಲಾ ದೊಡ್ಡನಗರಗಳಲ್ಲೂ ಇದೆ. ಉದಾಹರಣೆಗೆ ದಾವಣಗೆರೆಯನ್ನೇ ತೆಗೆದುಕೊಳ್ಳಿ. ದಾವಣಗೆರೆಯಲ್ಲಿ ೨೦ ಕೊಳಚೆ ಪ್ರದೇಶಗಳು ಇವೆ ಎಲ್ಲಾ ನಗರಗಳಲ್ಲೂ ಏನು ಸ್ಲಂಸ್ ಇವೆ ಅವಕ್ಕೆ ಯಾವ ಒಂದು ಆಧಾರದ ಮೇಲೆ ಖರ್ಚು ಮಾಡುವುದಕ್ಕೆ ತಾವು ವ್ಯವಸ್ಥೆ ಮಾಡಿದ್ದೀರಾ? ದಾವಣಗೆರೆ ನಗರದಲ್ಲಿ ಕೊಳಚೆ ನಿರ್ಮೂಲನಾ ಮಂಡಲಿಯವರು ಅಲ್ಲಿರುವ ಸ್ಲಂಸ್‌ಗಳ ಅಭಿವೃದ್ಧಿ ಬಗ್ಗೆ ಯಾವುದೇ ರೀತಿಯ ಅಭಿವೃದ್ಧಿ ಕಾರ್ಯಕ್ರಮವಾಗಲಿ ಅಥವಾ ಅವರ ಸಮಸ್ಯೆಗಳ ಬಗ್ಗೆ ಪರಿಹಾರದ ಬಗ್ಗೆಯಾಗಲೀ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲಾ ಇದಕ್ಕೆ ಕಾರಣ ಏನು?

ಶ್ರೀ ಧರ್ಮಸಿಂಗ್.—ಎಲ್ಲೇ ಆಗಲಿ ಅದು ಸ್ಲಂ ಪ್ರದೇಶ ಎಂದು ಡಿಕ್ಲೇರ್ ಆದಮೇಲೆ ಅನಂತರ ಅದನ್ನು ಇಂಪ್ರೂ ಮಾಡುವುದಕ್ಕೆ ದುಡ್ಡು ಕೊಡುತ್ತೇವೆ. ಈಗಾಗಲೇ ಅದಕ್ಕೆ ಖರ್ಚು ಮಾಡುವುದಕ್ಕೆ ೧ ಕೋಟಿ ೬೨ ಲಕ್ಷ ರೂಪಾಯಿ ಇಟ್ಟಿದ್ದೇವೆ. ಒಂದುವೇಳೆ ದಾವಣಗೆರೆಯಲ್ಲಿ ಇರತಕ್ಕಂಥ ಸ್ಲಂಸ್‌ಗಳನ್ನು ಇಂಪ್ರೂವ್ ಮಾಡುವುದಕ್ಕೆ ಅವರು ಏನೊಂದು ಕ್ರಮವನ್ನು ತೆಗೆದುಕೊಂಡಿಲ್ಲ ಎನ್ನುವುದಾದರೆ ಅದನ್ನು ತರಿಸಿ ನೋಡುತ್ತೇವೆ ಅವರು ಒಂದು ವೇಳೆ ತೆಗೆದುಕೊಳ್ಳುವುದನ್ನು ಬಿಟ್ಟಿದ್ದರೆ ಅದನ್ನು ತೆಗೆದುಕೊಳ್ಳುವುದರ ಬಗ್ಗೆ ಮಾತನಾಡುತ್ತೇನೆ.

ಶ್ರೀ ವಿ.ಎಲ್. ಶಿವಪ್ಪ.—ತಾವು ಇದರಲ್ಲಿ ಕೊಳಚೆ ಪ್ರದೇಶಗಳಿಗೆ ೧೦ ಬೋರ್‌ವೆಲ್‌ಗಳನ್ನು ಆಳವಡಿಸಲಾಗುತ್ತಿದೆ ಎಂದು ಹೇಳಿದ್ದೀರಿ. ಬಹಳ ದಿವಸದಿಂದಲೂ ಆ ಬೋರ್‌ವೆಲ್ಸ್‌ಗೆ ಪಂಪ್ ಸೆಟ್ಸ್‌ನ್ನೇ ಜೋಡಿಸಿಲ್ಲಾ, ಇನ್ನೂ ಪಂಪ್‌ಸೆಟ್ಸ್ ಜೋಡಿಸಿಲ್ಲಾ. ಇದರಿಂದ ಅಲ್ಲಿರತಕ್ಕಂಥಾ ಜನಗಳಿಗೆ ಕುಡಿಯಂಥ ನೀರಿನ ತೊಂದರೆಯಾಗಿದೆ, ಇನ್ನೂ ಕೂಡ ಅವರಿಗೆ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಮಾಡಿಲ್ಲಾ. ಆದುದರಿಂದ ತಾವು ಈಗಾಲಾದರೂ ಕೂಡ ಬಹುಭಾಗದಲ್ಲಿ ಬೋರ್‌ವೆಲ್ಸ್ ಏನು ತೆಗೆದಿದ್ದೀರೋ ಅವಕ್ಕೆ ಪಂಪ್‌ಸೆಟ್ಸ್‌ನ್ನು ಅಳವಡಿಸಿ ಅವರಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡುತ್ತೀರಾ?

ಶ್ರೀ ಧರ್ಮಸಿಂಗ್.—ಈಗಾಗಲೇ ನಾನು ಮೊದಲೇ ಹೇಳಿದ ಹಾಗೆ ೧೦ ಬೋರ್‌ವೆಲ್ಸ್‌ಗಳನ್ನು ಒದಗಿಸಲಾಗಿದೆ. ಅಲ್ಲಿ ಪಂಪ್‌ಸೆಟ್ಸ್‌ಗಳನ್ನು ಜೊಡಿಸಲು ಅವಶ್ಯಕ ಎಂದು ಕಂಡುಬಂದರೆ ಪಂಪ್ ಸೆಟ್ಸ್‌ನ್ನು ಜೋಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.